ದಿನಾಂಕ 01.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾಯಿತು.

ಪಾಟೀ ಸವಾಲು ಃ ಶ್ರೀ ಕೆ.ಜೆ.ಎನ್ ವಕೀಲರಿಂದ ಎದುರುದಾರರ ಪರವಾಗಿ

1. ಬೈಕ್‌ನ್ನು ನನ್ನ ತಮ್ಮ ಚಲಾಯಿಸುತ್ತಿದ್ದನು. ಆತನಿಗೂ ಸಹ ಪೆಟ್ಟಾಗಿರುತ್ತದೆ. ನನ್ನ ತಮ್ಮನ ವಿರುದ್ಧವು ಸಹ ಪೋಲೀಸರು ದೋಷಾರೋಪಣಾ ಪತ್ರ ಸಲ್ಲಿಸಿರುತ್ತಾರೆ ಎಂದರೆ ಸರಿ. ನನ್ನ ತಮ್ಮ ಚಲಾಯಿಸುತ್ತಿದ್ದ ಬೈಕ್ ಆತನ ಹೆಸರಿನಲ್ಲಿಯೆ ಇತ್ತು. ಸದರಿ ಬೈಕಿಗೆ ವಿಮಾ ಪಾಲಿಸಿ ಇರಲಿಲ್ಲ. ನಾನು ಅರ್ಜಿಯಲ್ಲಿ ತಿಳಿಸಿರುವ ವೆಚ್ಚಕ್ಕೆ ಅನುಗುಣವಾಗಿ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಅರ್ಜಿಯಲ್ಲಿ ತಿಳಿಸಿರುವ ರೀತ್ಯಾ ಯಾವುದೇ ಖರ್ಚು ಆಗಿಲ್ಲ, ನಾನು ಹೆಚ್ಚಿಗೆ ಪರಿಹಾರದ ಹಣ ಪಡೆಯಲು ಆ ರೀತಿ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರು ಯಾವುದೇ ಪರಿಹಾರದ ಹಣ ನೀಡಲು ಭಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮನ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

**ತೆ ನ್ಯಾ ನ ಉ ಮೇ ಬೆ ಮಾಡಿಸಲಾಯಿತು.**

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.